# ಕರ್ನಾಟಕ ವಿಧಾನಸಭೆ
## ಹದಿನಾಲ್ಕನೇ ವಿಧಾನಸಭೆ
## ಹನ್ನೆರಡನೇ ಅಧಿವೇಶನ

# ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-37)**

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. 38ಎ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 10) 38ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"38ಎ. **ಕೃಷಿ ಕಾರ್ಮಿಕರಿಗೆ ಮಾಲಿಕತ್ವ ಪ್ರಮಾಣಪತ್ರವನ್ನು ನೀಡುವುದು.-** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, 1979ರ ಜನವರಿ ಮೊದಲ ದಿನಕ್ಕೆ ನಿಕಟಪೂರ್ವದಲ್ಲಿ ಯಾವೊಬ್ಬ ಕೃಷಿ ಕಾರ್ಮಿಕನು, ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ, ಅಂಥ ವಾಸದ

ಮನೆಯನ್ನು, ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯಕವಾಗಿರುವ ಭೂಮಿಯು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಮತ್ತು ಕೃಷಿ ಕಾರ್ಮಿಕನು ಅದರ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**ವಿವರಣೆ:**–ಈ ಪ್ರಕರಣದ ಉದ್ದೇಶಕ್ಕಾಗಿ, ಮಾಲೀಕನ ಮನೆಯ ಭಾಗವಾಗಿರುವ ಅಥವಾ ಅಂಥ ಭೂಮಿಯಲ್ಲಿ ತಾತ್ಕಾಲಿಕ ನಿವಾಸವಾಗಿರುವ ವಾಸದ ಮನೆಯಲ್ಲಿ ವಾಸಿಸುತ್ತಿರುವ ಕೃಷಿ ಕಾರ್ಮಿಕನನ್ನು ಅದರಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದಾನೆಂದು ಪರಿಗಣಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಲೀಕನೆಂದು ನೋಂದಾಯಿತನಾಗಲು ಹಕ್ಕುಳ್ಳವನಾಗಿರುವ ಪ್ರತಿಯೊಬ್ಬ ಕೃಷಿ ಕಾರ್ಮಿಕನು, ಸಹಾಯಕ ಆಯುಕ್ತರಿಗೆ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಗೆ, ನಿಯಮಿಸಿದ ರೀತಿಯಲ್ಲಿ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷ ಪೂರ್ಣಗೊಳ್ಳುವ ದಿನದಂದು ಅಥವಾ ಅದಕ್ಕೆ ಮೊದಲು ಒಂದು ಅರ್ಜಿಯನ್ನು ಸಲ್ಲಿಸಬಹುದು ಮತ್ತು ನಿಯಮಿಸಬಹುದಾದ ಅಂಥ ವಿಚಾರಣೆಯ ತರುವಾಯ, ಸಹಾಯಕ ಆಯುಕ್ತನು ಅಥವಾ ಅಧಿಕೃತ ಅಧಿಕಾರಿಯು, ಆದೇಶದ ಮೂಲಕ, ಮಾಲೀಕನೆಂದು ನೋಂದಾಯಿಸಿಕೊಳ್ಳಲು ಅರ್ಹನಾದ ವ್ಯಕ್ತಿಯನ್ನು ಮತ್ತು ಆತನು ಹಾಗೆ ನೋಂದಾಯಿತನಾಗಲು ಅರ್ಹನಾಗಿರುವ ವ್ಯಕ್ತಿಯ ಸಂಬಂಧದಲ್ಲಿನ ಭೂಮಿಯನ್ನು ಹಾಗೂ ನಿಯಮಿಸಬಹುದಾದ ಅಂಥ ಇತರ ವಿಷಯಗಳನ್ನು ಕುರಿತು ನಿರ್ಧರಿಸತಕ್ಕದ್ದು ಮತ್ತು ಆದೇಶದ ಪ್ರತಿಯನ್ನು ತಹಸೀಲ್ದಾರನಿಗೆ ಕಳುಹಿಸತಕ್ಕದ್ದು.

(3) ತಹಸೀಲ್ದಾರನು, (2)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ಸ್ವೀಕರಿಸಿದ ಮೇಲೆ 47ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಿರ್ಧರಿಸಿದ ಮೊತ್ತವನ್ನು ಕೃಷಿ ಕಾರ್ಮಿಕನು ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ ಅಂಥ ಭೂಮಿಯಲ್ಲಿನ ತನ್ನ ಹಕ್ಕುಗಳನ್ನು ರದ್ದುಗೊಳಿಸುವುದಕ್ಕಾಗಿ ಭೂ ಮಾಲೀಕನು ಹಕ್ಕುಳ್ಳವನಾಗಿರತಕ್ಕ ಮೊತ್ತವನ್ನು ನಿರ್ಧರಿಸತಕ್ಕದ್ದು. ತಹಸೀಲ್ದಾರನು, ಅಂಥ ವಾಸದ ಮನೆ ಮತ್ತು ಭೂಮಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ಮತ್ತು ವ್ಯಾಪ್ತಿಯನ್ನು ಹಾಗೂ ಆತನು ಅದರ ಮಾಲೀಕನೆಂದು ನೋಂದಾಯಿಸಲಾಗಿದೆ ಎಂದು ನಿರ್ದಿಷ್ಟಪಡಿಸಿ, ಈ ಪರಿಣಾಮವಾಗಿ ಒಂದು ಅಧಿಸೂಚನೆಯನ್ನು ಹೊರಡಿಸತಕ್ಕದ್ದು ಮತ್ತು ಅಂಥ ಕೃಷಿ ಕಾರ್ಮಿಕನಿಗೆ ಪ್ರಮಾಣಪತ್ರವನ್ನೂ ಸಹ ನೀಡತಕ್ಕದ್ದು. ಪ್ರಮಾಣಪತ್ರದ ಒಂದು ಪ್ರತಿಯನ್ನು

ತಹಸೀಲ್ದಾರನು ಉಪ-ನೋಂದಣಾಧಿಕಾರಿಗೆ ಕಳುಹಿಸಿತಕ್ಕದ್ದು, ಆತನು, ನೋಂದಣಿ ಅಧಿನಿಯಮ, 1908ರಲ್ಲಿ (1908ರ ಕೇಂದ್ರ ಅಧಿನಿಯಮ 16) ಏನೇ ಇದ್ದರೂ, ಅದನ್ನು ನೋಂದಾಯಿಸತಕ್ಕದ್ದು. ಕೃಷಿ ಕಾರ್ಮಿಕನು ಇರಸಾಲು ಮಾಡಿದ ಮೊತ್ತವನ್ನು ಭೂ ಮಾಲೀಕನಿಗೆ ಒಂದೇ ಮೊತ್ತದಲ್ಲಿ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(4) 38ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳನ್ನು, ಸಾಧ್ಯವಿರುವಷ್ಟರಮಟ್ಟಿಗೆ ಅನ್ವಯಿಸತಕ್ಕದ್ದು ಮತ್ತು "ನ್ಯಾಯಾಧಿಕರಣ"ಕ್ಕೆ ಕಳುಹಿಸಿರುವುದನ್ನು, ಸಹಾಯಕ ಆಯುಕ್ತ ಅಥವಾ ಅಧಿಕೃತ ಅಧಿಕಾರಿಗೆ ಕಳುಹಿಸಲಾಗಿದೆ ಎಂಬಂತೆ ಅರ್ಥೈಸತಕ್ಕದ್ದು.

(5) 61ನೇ ಪ್ರಕರಣದ ಉಪಬಂಧಗಳನ್ನು ಬಾಡಿಗೆದಾರನು ಅಧಿಭೋಗದಾರನಾಗಿ ನೋಂದಾಯಿಸಿದ ಭೂಮಿಯ ಸಂಬಂಧದಲ್ಲಿ ಅನ್ವಯಿಸುವಂತೆಯೇ ಈ ಪ್ರಕರಣದ ಅಡಿಯಲ್ಲಿ ಕೃಷಿ ಕಾರ್ಮಿಕನಿಗೆ ಮಂಜೂರಾದ ವಾಸದ ಮನೆ ಅಥವಾ ನಿವೇಶನಕ್ಕೂ ಅನ್ವಯಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕೃಷಿ ಕಾರ್ಮಿಕನು 1979ರ ಜನವರಿ 1ನೇ ದಿನಕ್ಕೂ ನಿಕಟಪೂರ್ವದಲ್ಲಿ ಆತನಿಗೆ ಸೇರದಿರುವ ಭೂಮಿಯ ಮೇಲೆ ಕಟ್ಟಿದ ವಾಸದ ಮನೆಗೆ ಸಂಬಂಧಿಸಿದಂತೆ, ಮಾಲೀಕನಾಗಿ ನೋಂದಣಿಗೆ ಹಕ್ಕುಳ್ಳವನ್ನಾಗಲು ಅಂಥ ಭೂಮಿಯನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016 ಪ್ರಾರಂಭವಾದ ದಿನಾಂಕದಿಂದ ಸರ್ಕಾರದಲ್ಲಿ ನಿಹಿತವಾಗುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು (1962ರ ಕರ್ನಾಟಕ ಅಧಿನಿಯಮ 10) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(ತಾತ್ಕಾಲಿಕವಾಗಿ ಅಂಗೀಕರಿಸಲಾಗಿದೆ)

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

**ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2016ಕ್ಕೆ**
**(2016ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 37) ತಿದ್ದುಪಡಿ**

**ಕಾಗೋಡು ತಿಮ್ಮಪ್ಪ, ಕಂದಾಯ ಮಂತ್ರಿಗಳು ಇವರಿಂದ**

ದಿನಾಂಕ: 22.03.2017ರಂದು ಪತ್ರ ಸಂಖ್ಯೆ: ಸಂವ್ಯಶಾಇ 54 ಶಾಸನ 2016ರಲ್ಲಿ ನೀಡಿದ ತಿದ್ದುಪಡಿಯನ್ನು ನಾನು ಹಿಂದಕ್ಕೆ ಪಡೆದು ಈಗ ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2016ಕ್ಕೆ (2016ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 37) ಈ ಮುಂದಿನ ತಿದ್ದುಪಡಿಯನ್ನು ತರುವ ನನ್ನ ಉದ್ದೇಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ, ಎಂದರೆ:-

**ಖಂಡ – 2**

ಸದರಿ ವಿಧೇಯಕದಲ್ಲಿ, 2ನೇ ಖಂಡದಲ್ಲಿ, ಸೇರಿಸಲು ಉದ್ದೇಶಿಸಿರುವ 38ಎ ಪ್ರಕರಣದಲ್ಲಿ,-

(i) (1) ನೇ ಉಪ ಪ್ರಕರಣಕ್ಕೆ, ವಿವರಣೆಯನ್ನು ಹೊರತುಪಡಿಸಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೊನಿಯಂಥ ದಾಖಲಿಸಿಲ್ಲದ ಜನವಸತಿಗಳಲ್ಲಿ ಅಥವಾ ನಿಯಮಿಸಲಾದ ವಿಧಾನದಲ್ಲಿ ಸರ್ವೇ ನಂಬರುಗಳು ಮತ್ತು ಗಡಿಗಳನ್ನು ನಿರ್ದಿಷ್ಟಪಡಿಸಿ ಜಿಲ್ಲಾಧಿಕಾರಿಯು ಹಾಗೆ ಅಧಿಸೂಚಿಸಿದ ಆ ಗ್ರಾಮದ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಯಾವುದೇ ಅಂಥ ಇತರ ದಾಖಲಿಸಿಲ್ಲದ ಜನವಸತಿಗಳಲ್ಲಿ, ಕೃಷಿ ಕಾರ್ಮಿಕನು ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ ಮತ್ತು ಅಂಥ ವಾಸದ ಮನೆಯನ್ನು ಅಥವಾ ವಾಸದ ಮನೆಗಳನ್ನು, ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯವಾಗಿರುವ ಭೂಮಿಯು, ಜಿಲ್ಲಾಧಿಕಾರಿಯು ಹೊರಡಿಸಿದ ಅಂಥ ಅಧಿಸೂಚನೆಯ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಮತ್ತು ಕೃಷಿ ಕಾರ್ಮಿಕನು ಅದರ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು"; ಮತ್ತು

(ii) (2)ನೇ ಉಪಪ್ರಕರಣದಲ್ಲಿ "ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "(1)ನೇ ಉಪಪ್ರಕರಣದ ಅಡಿಯಲ್ಲಿ ಜಿಲ್ಲಾಧಿಕಾರಿಯು ಹೊರಡಿಸಿದ ಅಧಿಸೂಚನೆಯ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಎಸ್.ಮೂರ್ತಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ 02** | ಸೇರಿಸಲು ಉದ್ದೇಶಿಸಿರುವ 38ಎ ಪ್ರಕರಣದ,-<br>**(i)** (2)ನೇ ಉಪಪ್ರಕರಣವು ಕೃಷಿ ಕಾರ್ಮಿಕನು ಅರ್ಜಿಯನ್ನು ಸಲ್ಲಿಸುವ ವಿಧಾನ, ಸಹಾಯಕ ಆಯುಕ್ತ ಅಥವಾ ಅಧಿಕೃತ ಅಧಿಕಾರಿಯು ಕೃಷಿ ಕಾರ್ಮಿಕನ ವಾಸದ ಮನೆಯ ಮಾಲೀಕತ್ವ ಮತ್ತು ಹಕ್ಕಿನ ಬಗ್ಗೆ ವಿಚಾರಣೆಯನ್ನು ನಡೆಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>**(ii)** (3)ನೇ ಉಪಪ್ರಕರಣವು ಕೃಷಿ ಕಾರ್ಮಿಕನಿಗೆ ನೀಡುವ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಲು ಅಗತ್ಯವಾಗಿ ಬೇಕಾದ ವಾಸದ ಮನೆಯ ಮತ್ತು ಭೂಮಿಯ ವ್ಯಾಪ್ತಿ ಮತ್ತು ಇತರ ವಿವರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು.

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು. ಪಿ7, ಕಾಸೂ , 500–ಪ್ರತಿಗಳು 22ನೇ ಮಾರ್ಚ್, 2017

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**TWELFTH SESSION**

# THE KARNATAKA LAND REFORMS (AMENDMENT) BILL, 2016

**(L.A. Bill No. 37 of 2016)**

A Bill further to amend the Karnataka Land Reforms Act, 1961.

Whereas it is expedient further to amend the Karnataka Land Reforms Act, 1961 (Karnataka Act 10 of 1962) for the purposes hereinafter appearing.

Be it enacted by the Karnataka State Legislature in the sixty-seventh year of the Republic of India, as follows:-

**1. Short title and commencement.-** (1) This Act may be called the Karnataka Land Reforms (Amendment) Act, 2016.

(2) It shall come into force on such date as the State Government may by notification appoint.

**2. Insertion of new section 38A.-** In the Karnataka Land Reforms Act, 1961 (Karnataka Act 10 of 1962), after section 38, the following shall be inserted, namely:-

"**38A. Grant of certificate of ownership to an agricultural labourer.-** (1) Notwithstanding anything contained in this Act or any other law for the time being in force, where in any village, agricultural labourer is ordinarily residing in a dwelling house on a land not belonging to him immediately prior to first day of January 1979, such dwelling house alongwith the site thereof and land immediately appurtenant thereto and necessary for its enjoyment shall, on the date of commencement of the Karnataka Land Reforms (Amendment) Act, 2016 vest absolutely in the

State Government, free from all encumbrances and the agricultural labourer shall be entitled to be registered as owner thereof.

**Explanation.-** For the purpose of this section an agricultural labourer residing in a dwelling house which is a portion of the house of the owner or which is a temporary residence on such land shall not be regarded as ordinary residing therein.

(2) Every agricultural labourer entitled to be registered as a owner under sub-section (1) may make an application to the Assistant Commissioner or any other officer authorized by the State Government, in the prescribed manner on or before completion of one year from the date of commencement of the Karnataka Land Reforms (Amendment) Act, 2016 and the Assistant Commissioner or the officer authorized, shall after such enquiry as may be prescribed, by order, determine the person entitled to be registered as owner and the dwelling house and land in respect of which he is entitled to be so registered and such other matters as may be prescribed and forward a copy of the Order to the Tahasildar.

(3) The Tahasildar shall, on receipt of the order passed under sub-section(2) determine in the manner specified in sub-sections (1) and (2) of section 47, the amount of the land owner shall be entitled to, for the extinguishment of his rights in such land on payment of the amount determined, to the Government, by the agricultural labourer, the Tahasildar shall issue a notification to this effect and also issue a certificate to such labourer specifying the extent and such other particulars as may be prescribed relating to such dwelling house and land and that he shall be registered as owner thereof. A copy of the certificate shall be forwarded by the Tahasildar to the sub-registrar who shall, notwithstanding anything contained in the Registration Act, 1908 (Central Act 16 of 1908) register the

same. The owner of the land shall be paid the amount remitted by the agricultural labourer in cash in a lump sum.

(4) The provisions of sub-sections (2) and (3) of section 38 shall, so as may be, apply and the reference to "Tribunal" shall be construed as being reference to Assistant commissioner or officer authorized.

(5) The provisions of section 61 shall apply to a dwelling house or site granted under this section to an agricultural labourer as they apply to a land in respect of which a tenant has been registered as an occupant."

## STATEMENT OF OBJECTS AND REASONS

It is considered necessary to amend the Karnataka Land Reforms Act, 1961 (Karnataka Act 10 of 1962), to provide for an agricultural labourer to be entitled for registration as owner in respect of dwelling house built on land not belonging to him immediately prior to 1st day of January 1979, by vesting such Land in Government on the date of commencement of the Karnataka Land Reforms (Amendment) Act, 2016 and matters connected therewith or incidental thereto.

Hence the Bill,

(Provisionally admitted)

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**THIRTEENTH SESSION**

**(ADJOURNED MEETINGS)**

Amendments to the Karnataka Land Reforms (Amendment) Bill, 2016. (L.A.Bill No. 37 of 2016).

By Shri Kagodu Thimmappa, Minister for Revenue

I beg to move the following amendments to the Karnataka Land Reforms (Amendment) Bill, 2016 (L.A. Bill No. 37 of 2016), by withdrawing the Official Amendment given in the letter No.DPAL 54 SHASANA 2016, Dated: 22.03.2017 namely:-

**Clause-2**

In the said Bill, in clause 2, in section 38A sought to be inserted,-

(i) for sub-section (1) except the explanation the following shall be substituted, namely:-

"(1) Notwithstanding anything contained in this Act or any other law for the time being in force, where in any village, agricultural labourer is ordinarily residing on dwelling house on a land not belonging to him in an unrecorded habitations like Lambani Tanda, Gollarahatti, Vaddarahatti, Kurubarhatti, Nayakarahatti, Majare Grama, Haadi, Doddi, Palya, Camp, Colony or any other such unrecorded habitations falling within the jurisdiction of that village, on the date of commencement of the Karnataka Land Reforms (Amendment) Act, 2016, which is notified as such by the Deputy Commissioner, specifying the survey numbers and boundaries in the prescribed manner, such dwelling house or houses along with the site thereof and land immediately appurtenant thereto and necessary for its enjoyment shall, on the date of such notification by the Deputy Commissioner, vest

absolutely in the State Government, free from all encumbrances and the agricultural labourer shall be entitled to be registered as owner thereof"; and

(ii) in sub-section (2), for the words, brackets and figures "commencement of the Karnataka Land Reforms (Amendment) Act, 2016" the words, brackets and figure "notification by the Deputy Commissioner under sub-section (1)" shall be substituted.

**(S. MURTHY)**
**Secretary (I/C)**

## FINANCIAL MEMORANDUM

There is no extra expenditure involved in the proposed Legislative measure.

# MEMORANDUM REGARDING DELEGATED LEGISLATION

| | |
|---|---|
| Clause 2 | Section 38A proposed to be inserted:-<br><br>(i) Sub-section(2), empowers the State Government to make rules regarding the manner of making application by the agricultural labourer, manner of holding enquiry by the Assistant Commissioner or the officer authorized regarding ownership and entitlement of dwelling house by the agricultural labourer;<br>(ii) Sub-section(3), empowers the State Government to make rules regarding the extent and other particulars of dwelling house and land that are required to be specified in the certificate issued to the agricultural labourer. |

The proposed delegation of legislative power is normal in Character.

**KAGODU TIMMAPPA**
Minister for Revenue.

**S.Murthy**
Secretary (I/C)
Karnataka Legislative Assembly.

Government Press, Vikasa Soudha, Bengaluru, 22nd March 2017 P7, W.D., Copies 500